as required under Section 619 (A) of the Companies Act 1956.

VIII. Sri D. LAXMISAGAR (Minister for Law & Parliamentary Affairs) Sir, on behalf of (Minister for Animal Husbandry and Veterinary Services and Horticulture) I beg to lay :-

Annual repart of the Karnataka Sheep and Sheep Products Development Corporation for the year 1981-82.

as required under Section 619 (A) of the Companies Act 1956.

**ಅಧ್ಯಕ್ಷರು .** ಕಾಗದ ಪತ್ರಗಳನ್ನು ಮಂಡಿಸಲಾಗಿದೆ. ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲೇ ಇರುವಾಗ ಅವರವರೇ ಅವುಗಳನ್ನು ಇಡುವುದು ಒಳ್ಳೆಯದು.

**ಶ್ರೀ ಎಸ್. ಬಂಗಾರಪ್ಪ .**—ನಿಯಮಾವಳಿಯಲ್ಲಿ ಇರುವ ಹಾಗೆ ಆಯಾಯ್ದು ಮಂತ್ರಿಗಳೇ ಅವುಗಳನ್ನು ಇಡಬೇಕು. ಅವರುಗಳು ಸಭೆಯಲ್ಲಿ ಇಲ್ಲದೇ ಇದ್ದಾಗ ಬೇರೆಯವರು ಇಡಬಹುದು ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇರುವಾಗ ಅವರಿಂದಲೇ ಮಂಡಿಸುವುದೇ ಸರಿಯಾದ ಕ್ರಮವಾಗುತ್ತದೆ.

**ಅಧ್ಯಕ್ಷರು .**—ಮಾನ್ಯ ಮಂತ್ರಿಯವರು ಈಗಾಗಲೇ ಕಾಗದಪತ್ರಗಳನ್ನು ಇಟ್ಟುಬಿಟ್ಟಿದ್ದಾರೆ.

**ಶ್ರೀ ಎಸ್. ಬಂಗಾರಪ್ಪ .**—ಅವರಿಗೆ ಸಂಬಂಧಪಟ್ಟ ಕಾಗದಪತ್ರಗಳಾದರೆ ಅದು ಸರಿ. ಆದರೆ ಉಳಿದವರಿಗೆ ಅದು ಅನ್ವಯವಾಗುವುದಿಲ್ಲ.

**ಶ್ರೀ ಕೆ. ಎಚ್. ರಂಗನಾಥ್ :**—ಅವರವರ ಹೆಸರಿನಲ್ಲಿ ಇರುವುದನ್ನು ಈ ಸಭೆಯಲ್ಲಿ ಇಡುವುದಕ್ಕೆ ಅದೇನು ಅವಮಾನವೆ ?

**ಶ್ರಿ ಎಸ್. ಆರ್. ಬೊಮ್ಮಾಯಿ .**—ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದು ಸರಿಯಾಗಿದೆ. ಇದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಇನ್ನು ಮುಂದೆ ಇದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಸಮಯ ಉಳಿತಾಯ ಮಾಡಲಿಕ್ಕೆ ಹೀಗೆ ಮಾಡಲಾಯಿತು ಅಷ್ಟೆ.

SRI S. BANGARAPPA :—This is not correct, when the other Ministers are very much present here. ಈ ಪದ್ಧತಿ ಒಳ್ಳೆಯದಲ್ಲ. ಇದನ್ನು ವಿಚಾರ ಮಾಡುವುದರಲ್ಲಿ ಅರ್ಥ ಇದೆ.

**ಅಧ್ಯಕ್ಷರು .**—ತಾವು ಹೇಳುವುದಕ್ಕೆ ಮುಂಚೆಯೇ ಇದು ಸರಿಯಾದ ಕ್ರಮ ಅಲ್ಲವೆಂದು ನಾನು ಹೇಳಿದ್ದೇನೆ ಸದನದಲ್ಲಿ ಮಂತ್ರಿಗಳು ಇದ್ದಾಗ ಅವರ ಪರವಾಗಿ ಬೇರೆಯವರು ಕಾಗದಪತ್ರಗಳನ್ನು ಇಡುವುದು ಒಳ್ಳೆಯ ಸಂಪ್ರದಾಯ ಅಲ್ಲವೆಂದು ನಾನು ಹೇಳಿದ್ದೇನೆ.

**ಶ್ರೀ ಎಸ್. ಬಂಗಾರಪ್ಪ .**—ಇದರ ಬಗ್ಗೆ ತಾವು ಒಂದು ಆದೇಶವನ್ನು ಕೊಡಬೇಕಾಗುತ್ತದೆ.

**ಅಧ್ಯಕ್ಷರು .**—ಈಗಾಗಲೇ ಈ ಕಾಗದಪತ್ರಗಳನ್ನು ಮಂಡಿಸಿಬಿಟ್ಟಿದ್ದಾರೆ. ಮುಂದಿನ ಸಾರಿ ಹೀಗೆ ಆಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರಲ್ಲ ?

## ಮನವಿಗಳು

**ವಿಷಯ : ಅಧ್ಯಕ್ಷರು ರಚಿಸಿರುವ ಸಮಿತಿಯ ಬಗ್ಗೆ**

**ಶ್ರೀ ಕೆ. ಎಚ್. ರಂಗನಾಥ್ .**—ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡದೇ ಹೋದರೆ ಅದು ತಪ್ಪಾಗುತ್ತದೆ. ಈ ಸದನ ಇಲ್ಲದೇ ಇದ್ದಂತಹ ಕಾಲದಲ್ಲಿ ಶ್ರೀ ಬಂಗಾರಪ್ಪನವರು ಮಾಡಿದ ಪ್ರಸ್ತಾಪದ ಬಗ್ಗೆ ಮಾನ್ಯ ಮಂತ್ರಿಗಳು ತಮಗೆ ಒಂದು ಪತ್ರ ಬರೆದಿದ್ದರು.

**ಅಧ್ಯಕ್ಷರು .**—ಈಗ ಗಮನ ಸೆಳೆಯುವ ಸೂಚನೆ ಬಗ್ಗೆ ಚರ್ಚೆ ಮೊದಲು ಮುಗಿದು ಬಿಡಲಿ. ಅಮೇಲೆ ನೀವು ಹೇಳಬಹುದು.

**ಶ್ರೀ ಕೆ. ಎಚ್. ರಂಗನಾಥ್ .**—ಇದು ಮೊದಲು ಮುಗಿದುಬಿಟ್ಟರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಅವರ ಪತ್ರದ ಪ್ರಕಾರ ಸಮಿತಿಯ ವ್ಯಾಪ್ತಿ 14ನೇ ತಾರೀಕು ಎಂದು ಇತ್ತು. ಈ ಸಮಿತಿಯನ್ನು ಅಸ್ತಿತ್ವಕ್ಕೆ ಬರುವಂತೆ ಮಾಡಿದ್ದೇ ಮೊದಲ ತಪ್ಪು. ತಪ್ಪು ಆದಮೇಲೂ ಕೂಡ ಅದು ಇಲ್ಲಿಯವರೆಗೂ ನಡೆದುಕೊಂಡು ಹೋಗಿದೆ ಎಂದರೆ ಇದು ಈ ಸದನದ ವ್ಯಾಪ್ತಿಗೆ ಮೀರಿದಂತಹ ವಿಷಯವಾಗುತ್ತದೆ. ಈ ಸದನದ ಹಕ್ಕು ಬಹಳ ಹೆಚ್ಚಿನಮಟ್ಟದ್ದು. ಸದನದ ಹಕ್ಕನ್ನು ಯಾರೇ ಆಗಲಿ, ಅಧ್ಯಕ್ಷರಾಗಲಿ, ಮುಖ್ಯಮಂತ್ರಿಗಳಾಗಲಿ, ಮತ್ತೆ ಯಾವ ಸದಸ್ಯರೇ ಆಗಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

**ಅಧ್ಯಕ್ಷರು .**—ನೋಟೀಸ್ ಕಳಿಸಿ. ಆದರಂತೆ ಚರ್ಚೆ ಮಾಡೋಣ.

**ಶ್ರೀ ಕೆ. ಎಚ್. ರಂಗನಾಥ್ .**—ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮಲ್ಲಿ ಕೆಲವರನ್ನು ತಾವು ಕರೆಸಿ ತಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ತಮ್ಮ ಸೌಜನ್ಯಕ್ಕೆ ನಾವು ಋಣಿಯಾಗಿದ್ದೇವೆ. ಸಮಿತಿಯನ್ನು ರಚಿಸುವುದು ತಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ. ಹಾಗಿದ್ದರೂ ಕೂಡ ತಾವು ವಿಚಾರಣೆ ಸಮಿತಿಯನ್ನು

ಮಾಡಿದ್ದಿರಿ. ಮುಖ್ಯ ಮಂತ್ರಿಯವರ ಪತ್ರದ ಪ್ರಕಾರ ಯಾವ ತಾರೀಖಿನವರೆಗೆ ವರದಿ ಕೊಡ ಬೇಕೆಂದು ಇದೆ ? 14ನೇ ತಾರೀಖು ಅಂತ ಇದೆ.

**ಅಧ್ಯಕ್ಷರು** .—ತಾವು ಈ ಬಗ್ಗೆ ನೋಟೀಸ್ ಕಳುಹಿಸಿ, ಚರ್ಚೆ ಮಾಡೋಣ ಅಂತ ಹೇಳುತ್ತಿದ್ದೇನೆ.

**ಶ್ರೀ ಕೆ. ಎಚ್. ರಂಗನಾಥ್** .—ಯಾವ ಆಧಾರದ ಮೇಲೆ ಈ ಸಮಿತಿ ಆಯಿತು ? ಯಾವ ಕಾನೂನಿನ ಅಡಿಯಲ್ಲಿ ಈ ಸಮಿತಿ ಆಯಿತು ?

**ಅಧ್ಯಕ್ಷರು** .—ಮುಂದಿನ ಕಾರ್ಯಕಲಾಪಗಳು ಮುಗಿಯಲಿ.

**ಶ್ರೀ ಎಂ. ರಘುಪತಿ** .—ನನ್ನದೊಂದು ಕ್ರಿಯಾಲೋಪ ಇದೆ I am raising a point of order ಯಾವುದೇ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾದರೆ, ನಿಯಮಾವಳಿ ಪ್ರಕಾರ ನೋಟೀಸ್ ಕೊಡದೆ ಪ್ರಸ್ತಾಪ ಮಾಡಬಾರದು. ಅಂತಹ ಯಾವುದಾದರೂ ಒಂದು ನೋಟೀಸ್ ತಮಗೆ ಬಂದಿದೆಯೆ ? ಬಂದಿದ್ದರೆ ಅದನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಬೇಕು. ಪಟ್ಟಿಯಲ್ಲಿ ಸೇರಿಸಿದ ಮೇಲೆ ಅದರ ಮೇಲೆ ವ್ಯಾಪಕವಾಗಿ ಚರ್ಚೆ ನಡೆಯಬೆಕು. ಚರ್ಚೆ ನಡೆಯುವುದಕ್ಕೆ ನಮ್ಮ ಅಡ್ಡಿ ಆತಂಕ ಏನೂ ಇಲ್ಲ. ಆದ್ದರಿಂದ ಶ್ರೀಮಾನ್ ರಂಗನಾಥ್‌ರವರು ಏನೊಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಅದು ನಿಯಮಾವಳಿ ಪ್ರಕಾರ ಸರಿಯಾದುದಲ್ಲ. ಆದ್ದರಿಂದ ಇದರ ಬಗ್ಗೆ ತಾವು ತೀರ್ಪನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಅಧ್ಯಕ್ಷರು** .—ನನಗೆ ಆ ತರಹ ಯಾವುದೇ ನೋಟೀಸ್ ಬಂದಿಲ್ಲ. ಆದ್ದರಿಂದ ....

**ಶ್ರೀ ಕೆ. ಎಚ್. ರಂಗನಾಥ್** .—ನಾನೂ ನೋಟೀಸ್ ಕೊಟ್ಟಿಲ್ಲ.

**ಅಧ್ಯಕ್ಷರು** .—ನೋಟೀಸ್ ಕೊಡದಿದ್ದರೆ ಹೇಗೆ ?

**ಶ್ರೀ ಕೆ. ಎಚ್. ರಂಗನಾಥ್** .—ಕೊಡದಿರುವುದಕ್ಕೆ ಕಾರಣವೇನೆಂದರೆ....

**ಶ್ರೀ ಎಂ. ಎಸ್. ಕೃಷ್ಣನ್** .—ಕಾರ್ಯಕ್ರಮದ ಪಟ್ಟಿಯ ಪ್ರಕಾರ ತಾವು ಈಗಾಗಲೇ ಗಮನ ಸೆಳೆಯುವ ಸೂಚನೆ ಎಂಬುದಾಗಿ ಹೇಳಿದ್ದೀರಿ. ಆದರೆ ಮಾನ್ಯ ಸದಸ್ಯರು ಯಾವುದೇ ಒಂದು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವಂತಹ ಅಧಿಕಾರ ಇದೆ. ಅವರಿಗೆ ಇರತಕ್ಕಂತಹ ಅಧಿಕಾರವನ್ನು ಕಡಿಮೆ ಮಾಡುತ್ತಿಲ್ಲ. ಆದರೆ ಗಮನ ಸೆಳೆಯುವ ಸೂಚನೆಗಳ ಪ್ರಸ್ತಾಪ ಮುಗಿದ ಮೇಲೆ ವಿಷಯವನ್ನು ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

**ಶ್ರೀ ಕೆ. ಎಚ್. ರಂಗನಾಥ್** .—ನಾನು ಏತಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇದನ್ನು ಯಾರೂ ವೈಯಕ್ತಿಕ ವಿಷಯವೆಂಬುದಾಗಿ ತೆಗೆದುಕೊಳ್ಳಬಾರದು. ಇದೊಂದು ಗಹನವಾದ ವಿಚಾರ.

**ಅಧ್ಯಕ್ಷರು** :—ಗಹನವಾದ ವಿಚಾರವಾದರೂ ಅದು ಶಾಸನಬದ್ಧವಾಗಿರಬೇಕು.

**ಶ್ರೀ ಕೆ. ಎಚ್. ರಂಗನಾಥ್** .—ಪ್ರತಿ ಸಾರಿ ಏನು ಆ ಸಮಿತಿ ಸಭೆ ಸೇರುತ್ತದೆ, ಆದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದಾರೆ.

**ಶ್ರೀ ಎನ್. ಹುಚ್ಚಮಾಸ್ತಿಗೌಡ** .—ಸದನದ ಕಾರ್ಯಕಲಾಪಗಳು ನಿಯಮಾವಳಿ ಪ್ರಕಾರ ನಡೆಯಬೇಕು. ನಿಯಾಮವಳಿಯನ್ನು ಅನುಸರಿಸದೇ ಯಾವುದೇ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ. ಇದರ ಬಗ್ಗೆ ತಾವೊಂದು ತೀರ್ಪು ಕೊಡಬೇಕು.

**ಅಧ್ಯಕ್ಷರು** .—ನನಗೆ ಈ ಬಗ್ಗೆ ನೋಟೀಸ್ ಬಂದಿಲ್ಲ. ಚರ್ಚೆಗೆ ಅವಕಾಶವಿಲ್ಲ.

**ಶ್ರೀ ಎಂ. ವೀರಪ್ಪಮೊಯ್ಲಿ** .—ಸನ್ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಂಗನಾಥ್‌ರವರು ಎತ್ತಿರುವಂತಹ ಪ್ರಶ್ನೆ, ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಡಬೇಕು ಅಷ್ಟಕ್ಕೇ ಸೀಮಿತವಾಗಿಲ್ಲ. ಏತಕ್ಕೆಂದರೆ ಇದು ತಮ್ಮ ಸ್ಥಾನಕ್ಕೆ ಸಂಬಂಧಪಟ್ಟ ವಿಚಾರ. ಆದ್ದರಿಂದ ಇದೊಂದು ಮಹತ್ವದ ವಿಚಾರ.

**ಅಧ್ಯಕ್ಷರು**.-ಆದ್ದರಿಂದ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಮಹತ್ವದ ನೋಟೀಸ್ ಕೊಡಬೇಕು.

**ಶ್ರೀ ಎಂ. ವೀರಪ್ಪಮೊಯ್ಲಿ** .—ಮುಂದೆ ಸದನದ ಕಲಾಪಗಳು ನಡೆಯುವುದಕ್ಕೆ ಮೊದಲು ತಾವು ಈ ಒಂದು ವಿವಾದದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ. ಇದು ಕ್ರಿಯಾಲೋಪದ ಪ್ರಶ್ನೆಯಲ್ಲ. ಶೂನ್ಯ ವೇಳೆಯಲ್ಲಿ ಕ್ರಿಯಾಲೋಪ ಎಲ್ಲಿದೆ ?

**ಶ್ರೀ ಎನ್. ಹುಚ್ಚಮಾಸ್ತಿಗೌಡ** .—ನೇರವಾಗಿ ತಮ್ಮ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ಅಂತಹ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮೊದಲು ಸಾಕಷ್ಟು ತಿಳುವಳಿಕೆಯನ್ನು ಕೊಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡಬೇಕು. ಅಧ್ಯಕ್ಷರಿಗೆ ಸಂಬಂಧಪಟ್ಟ ವಿಷಯವಾದ್ದರಿಂದ, ಸಾಕಷ್ಟು ತಿಳುವಳಿಕೆ ಕೊಟ್ಟು, ನಮಗೂ ಕಾಲಾವಕಾಶ ಕೊಟ್ಟು ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಹೊರತು, ತಿಳುವಳಿಕೆಯನ್ನು ಕೊಡದೇ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದು ಸೂಕ್ತವಾದುದಲ್ಲ. ಇದು ನಮ್ಮ ಕಾನೂನಿಗೆ ವಿರೋಧವಾಗುತ್ತದೆ.

**ಶ್ರೀ ಕೆ. ಎಚ್. ರಂಗನಾಥ್** .—ಮಾನ್ಯ ಅಧ್ಯಕ್ಷರೇ, ತಾವು ಅಷ್ಟು ಅವಸರ ಪಡಬಾರದು.

**ಅಧ್ಯಕ್ಷರು .**—ಅವಸರದ ಪ್ರಶ್ನೆಯಲ್ಲ.

**ಶ್ರೀ ಕೆ. ಹೆಚ್. ರಂಗನಾಥ್ .**—ತಾವು ಮಾನ್ಯ ಸದಸ್ಯರಾದಂತಹ ಹುಚ್ಚಮಾಸ್ತಿಗೌಡರ ಮಾತನ್ನು ಕೇಳಿದರೋ ಅಥವಾ ಕೇಳಲಿಲ್ಲವೋ ಗೊತ್ತಿಲ್ಲ. "ನೇರವಾಗಿ ಅಧ್ಯಕ್ಷರ ಮೇಲೆ ಆಪಾದನೆ ಇರುವುದರಿಂದ" ಎಂಬ ಮಾತನ್ನು ಅವರು ಹೇಳಿದ್ದಾರೆ. ಏಕೆಂದರೆ ನಾವು ಮಾತನಾಡತಕ್ಕಂತಹ ಪ್ರತಿಯೊಂದು ಮಾತು ನಡವಳಿಕೆಯಲ್ಲಿ ಹೋಗುತ್ತದೆ. ನಿಮ್ಮ ಮೇಲೆ ಆಪಾದನೆ ಮಾಡುತ್ತಿದ್ದೇನೆಂದು ನಾನು ಹೇಳಲಿಲ್ಲ. He is drawing his own inference.

**ಶ್ರೀ ಎನ್. ಹುಚ್ಚಮಾಸ್ತಿಗೌಡ.**—ಅವರು ಹೇಳಲಿಲ್ಲ.

**ಶ್ರೀ ಕೆ. ಹೆಚ್. ರಂಗನಾಥ್.**—ಈ ಸಭೆ ಈ ದಿವಸದಿಂದ ಸೇರಿದೆ. ಆ ಸಮಿತಿ ಇವತ್ತಿಗೂ ಅಸ್ತಿತ್ವದಲ್ಲಿರಬಹುದೇ ?

**ಶ್ರೀ ಎಂ. ರಘುಪತಿ.**—ಆದನ್ನು ನಂತರ ಮಾತನಾಡಬಹುದು.

**ಶ್ರೀ ಕೆ. ಹೆಚ್. ರಂಗನಾಥ್.**—ತಾವು ಯಾರು ನನಗೆ ಕೇಳುವುದಕ್ಕೆ ? ನಾನು ಈ ವಿಚಾರದಲ್ಲಿ ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಟ್ಟೇ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕು ಅಂತ ಹೇಳಿದರೆ ಆ ಮಾತು ಬೇರೆ. ಆ ಸಮಿತಿ ಇವತ್ತಿಗೂ ಅಸ್ತಿತ್ವದಲ್ಲಿರುವುದರಿಂದ ಸಭೆ ಸೇರಿದಾಗ ಒಂದು ವಿಷಯವನ್ನು ವಿಚಾರ ಮಾಡತಕ್ಕಂತಹ ಹಕ್ಕು ಪ್ರಾಪ್ತವಾಗುತ್ತದೆ.

**ಅಧ್ಯಕ್ಷರು.**—ಪ್ರಾಪ್ತವಾಗುತ್ತದೆ ಸರಿ. ತಾವು ನೋಟೀಸ್ ಕೊಡಿ. ನೋಟೀಸ್ ಕಳುಹಿಸದೇ ವಿಷಯವನ್ನು ಪ್ರಸ್ತಾಪ ಮಾಡಿದರೆ ಹೇಗೆ ?

**ಶ್ರೀ ಎನ್. ಹುಚ್ಚಮಾಸ್ತಿಗೌಡ.**—ಶ್ರೀಮಾನ್ ರಂಗನಾಥ್‌ರವರು ಆ ಮಾತನ್ನು ಹೇಳಲಿಲ್ಲ. ಆದರೆ ಶ್ರೀಮಾನ್ ಮೊಯ್ಲಿಯವರು ಪ್ರಸ್ತಾಪ ಮಾಡುತ್ತಾ, ನಿಮ್ಮ ಮೇಲೆ ಇರತಕ್ಕಂತಹ ಆಪಾದನೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವ ಹಾಗೆ ಇಲ್ಲ. ಪ್ರತ್ಯೇಕವಾಗಿ ನೋಟೀಸ್ ಕೊಟ್ಟರೆ ಚರ್ಚೆ ಮಾಡುವುದಕ್ಕೆ ಕಾಲಾವಕಾಶವನ್ನು ಸಾಕಾದಷ್ಟು ಕೊಟ್ಟು ನಿಮ್ಮ ಮೇಲೆ ಇರತಕ್ಕಂತಹ ಆಪಾದನೆ ಏನು ಎಂಬುದನ್ನು ಸಾಬೀತು ಮಾಡಲಿ.

**ಶ್ರೀ ಎಂ. ವೀರಪ್ಪ ಮೊಯ್ಲಿ.**—ನಾನು ಏನು ಹೇಳುತ್ತಿದ್ದೇನೆಂಬುದನ್ನು ದಯಮಾಡಿ ಕೇಳಿದರೆ ಒಳ್ಳೆಯದು. ಈ ಒಂದು ವಿಚಾರವನ್ನು ಸನ್ಮಾನ್ಯ ರಂಗನಾಥ್‌ರವರು ಏನು ಎತ್ತಿದ್ದಾರೆ, ಈ ವಿಷಯ ಚರ್ಚೆಗೆ ಆಸ್ಪದ ಆಗಬಾರದು ಎಂಬ ಸದ್ಭಾವನೆಯಿಂದಲೇ ಶ್ರೀಮಾನ್ ರಂಗನಾಥ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಸ್ಥಾನಕ್ಕೆ ಸಂಬಂಧಪಟ್ಟ ವಿಚಾರ ಸದನದಲ್ಲಿ ಚರ್ಚೆಯಾಗಬಾರದೆಂಬ ಸದುದ್ದೇಶದಿಂದ ಈ ವಿಚಾರವನ್ನು ಎತ್ತಿದ್ದೇನೆ. ಆಪಾದನೆ ಮಾಡಿದ್ದೇವೆಂದು ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದರು. ನಾನು ಇದು ತಮ್ಮ ಸ್ಥಾನಕ್ಕೆ ಸಂಬಂಧಪಟ್ಟ ವಿಚಾರ. ಏಕೆಂದರೆ ಈ ರೀತಿಯಾದ ವಿವಾದದ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೀರಿ.

**ಅಧ್ಯಕ್ಷರು.**—ಅದು ನಿಮ್ಮ ಅಭಿಪ್ರಾಯ.

**ಶ್ರೀ ಎಂ. ವೀರಪ್ಪ ಮೊಯ್ಲಿ.**—ನಮ್ಮ ಅಭಿಪ್ರಾಯವೇ ಇರಬಹುದು.

**ಶ್ರೀ ವೈ. ಕೆ. ರಾಮಯ್ಯ**—ಇದರ ಬಗ್ಗೆ ಬೇರೆಯವರೂ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು.

**ಶ್ರೀ ಎಂ. ವೀರಪ್ಪ ಮೊಯ್ಲಿ.**—ಈ ವಿಚಾರದಲ್ಲಿ ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಡದಿರುವುದಕ್ಕೆ ಸಕಾರಣವೂ ಇದೆ. ಏಕೆ ನೋಟೀಸ್ ಕೊಟ್ಟಿಲ್ಲವೆಂದರೆ, ಇದು ಚರ್ಚೆಗೆ ಆಸ್ಪದವಾಗಬಾರದೆಂದು. ತಮ್ಮ ಸ್ಥಾನ ಬಹಳ ಮಹತ್ವವಾದುದು, ತಮ್ಮ ಸ್ಥಾನದ ಗೌರವವನ್ನು ಕಾಪಾಡತಕ್ಕ ನೈತಿಕ ಜವಾಬ್ದಾರಿ ನಮ್ಮೆಲ್ಲರ ಸದಸ್ಯರದ್ದಾಗಿದೆ. ನೋಟೀಸ್ ಕೊಟ್ಟು ಚರ್ಚೆ ಮಾಡಬೇಕೆಂದು ದಯಮಾಡಿ ನಮಗೆ ಹೇಳಬಾರದು, ನಾವು ನಿಮ್ಮಿಂದ ಏನನ್ನು ನಿರೀಕ್ಷೆ ಮಾಡಿದ್ದೇವೆಂದು ಹೇಳಿದರೆ, ಈ ಸದನ ಸೇರಿದ ಕೂಡಲೇ ಈ ವಿಚಾರದಲ್ಲಿ ತಾವು ಸ್ವಲ್ಪ ತಿಳುವಳಿಕೆಯನ್ನು ಸದನಕ್ಕೆ ಕೊಟ್ಟಿದ್ದರೆ ಈ ಪ್ರಶ್ನೆಯನ್ನು ಅವರು ಎತ್ತುತ್ತಿರಲಿಲ್ಲ. ನೋಟೀಸ್ ಕೊಟ್ಟು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ದಯಮಾಡಿ ನಮಗೆ ಹೇಳಬಾರದೆಂದು ಬಹಳ ಸೌಜನ್ಯದಿಂದ ತಮ್ಮ ಹತ್ತಿರ ವಿನಂತಿ ಮಾಡಿಕೊಳ್ಳುತ್ತೇನೆ.

**ಅಧ್ಯಕ್ಷರು.**—ತಾವು ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದೀರಿ.

ಇದರ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾತನಾಡೋಣ. We want to Close this issue. We don't want to break up this issue. ಆದುದರಿಂದ ತಾವು ಇದರ ಬಗ್ಗೆ ನೋಟೀಸ್ ಕೊಟ್ಟೇ ಮಾತನಾಡಬೇಕು ಎಂದು ಒತ್ತಾಯ ಮಾಡಬಾರದು. ಈ ಸದನದಲ್ಲಿ ಮುಂದಿನ ಕಾರ್ಯಕಲಾಪಗಳು ನಡೆಯುವ ಮೊದಲು ಇದರ ಬಗ್ಗೆ ತಮ್ಮ ನಿಲುವು ಏನು ಎಂದು ಒಂದು ಸ್ಪಷ್ಟೀಕರಣವನ್ನು ತಿಳಿಯಪಡಿಸಿದರೆ, ಈ ಸದನಕ್ಕೆ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಟ್ಟಂತಾಗುತ್ತದೆ. ಅಲ್ಲದೆ ನಮ್ಮ ಮನಸ್ಸಿಗೂ ಸಹ ಒಂದು ರೀತಿ ನೆಮ್ಮದಿಯುಂಟಾಗಿ ಈ

ಸದನದಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಏನಾದರೂ ಪ್ರಶ್ನೆ ಎತ್ತಿದರೆ ಇದು ಬಲ ತೋರಿಸುವ ಪ್ರಶ್ನೆ ಎಂದು ಅಪಾರ್ಥ ಮಾಡಿಕೊಳ್ಳಬಾರದು. ಆದುದರಿಂದ ಇದರ ಬಗ್ಗೆ ತಮ್ಮ ನಿಲುವು ಏನು ಅನ್ನುವುದನ್ನು ಹೇಳಬೇಕು. ಹಾಗಾದರೆ ಇದರಿಂದ ತಮ್ಮ ಘನತೆ ಗೌರವವೂ ಹೆಚ್ಚಾಗುವುದಲ್ಲದೆ ಸದನದ ಘನತೆಯೂ ಹೆಚ್ಚುತ್ತದೆ ಎಂದು ಹೇಳಬಯಸುತ್ತೇನೆ. (ಗೊಂದಲ).

**ಶ್ರೀ ಜೆ. ಡಿ. ಸೋಮಪ್ಪ.** — ಅಧ್ಯಕ್ಷರೇ, ಆ ಕಡೆಯ ಸದಸ್ಯರುಗಳು ಮಾತನಾಡುವಾಗ ಈಕಡೆಯವರು ಏನೂ ಗಲಾಟೆ ಮಾಡದೆ ಅವರು ಹೇಳಿದುದನ್ನು ಆಲಿಸಿ ಕೇಳುತ್ತಿದ್ದರು. ಈಗ ನಮ್ಮ ಕಡೆಯವರು ಯಾರಾದರೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಮಧ್ಯೆ ಮಧ್ಯೆ ಮಾತನಾಡುವುದಕ್ಕೆ ಶುರು ಮಾಡುತ್ತಾರೆ. ಹಾಗೆ ಮಾಡದೇ ಇರುವ ಹಾಗೆ ಆ ಕಡೆಯ ಸದಸ್ಯರಿಗೆ ತಾವು ಆದೇಶ ಕೊಡಬೇಕು ಎಂದು ಹೇಳುತ್ತೇನೆ.

**ಶ್ರೀ ಎಸ್.ಆರ್. ಬೊಮ್ಮಾಯಿ.** — ಅಧ್ಯಕ್ಷರೇ, ಈ ಹಿಂದಿನ ಅಧ್ಯಕ್ಷರಾದಂಥಾ ಮಾನ್ಯ ಕೆ ಹೆಚ್. ರಂಗನಾಥ್‌ರವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ತಾವು ತೆಗೆದುಕೊಂಡಂಥಾ ಒಂದು ನಿರ್ಣಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಮಾತನಾಡುವಾಗ ಸಭಾಪತಿಗಳ ಒಂದು ಸ್ಥಾನ ಗೌರವವನ್ನು ನಾವೆಲ್ಲರೂ ಕಾಪಾಡಿಕೊಂಡು ಹೋಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಮಾತನಾಡುವಾಗ ತಾವು ವಿವಾದದ ಒಂದು ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ ಎನ್ನುವ ಮಾತನ್ನು ಒಳಸಿದರು. ಈ ಮಾತನ್ನು ನಾನು ವಿಷಾದದಿಂದ ಹೇಳುತ್ತೇನೆ. ಅವರು ಬಳಸಿದ ಈ ಪದಪ್ರಯೋಗ ಸರಿಯಾದುದಲ್ಲ. ಆಮೇಲೆ ಅವರು ಒಂದು ವಿವರಣೆಯನ್ನು ಕೊಟ್ಟರು. ಬಹಳ ಸಂತೋಷವಾಯಿತು. ತಾವು ಈ ಬಗ್ಗೆ ಒಂದು ಯುಕ್ತವಾದ ನಿರ್ಣಯವನ್ನು ತೆಗೆದುಕೊಂಡು ಪತ್ರಿಕೆಯ ಮುಖಾಂತರ ಹೇಳಿಕೆ ಕೊಟ್ಟಿದ್ದೀರಿ. ಈ ಒಂದು ನಿರ್ಣಯವನ್ನು ನಾವು ಏತಕ್ಕೆ ತೆಗೆದುಕೊಂಡಿದ್ದೇವೆ ಅನ್ನುವುದರ ಬಗ್ಗೆ ಸಾರ್ವಜನಿಕರಿಗೂ ತಿಳುವಳಿಕೆ ಕೊಟ್ಟಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಈ ಒಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾತನಾಡೋಣ ಅನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ಒಪ್ಪೋಣ. ಆದರೆ ಈಗ ಇದರ ಬಗ್ಗೆ ಮಾನ್ಯ ಸಭಾಪತಿಗಳು ಏನು ಒಂದು ನಿರ್ಣಯ ತೆಗೆದುಕೊಂಡಿದ್ದೀರಿ, ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಆದುದರಿಂದ ಈಗ ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

**ಶ್ರೀ ಕೆ. ಹೆಚ್. ರಂಗನಾಥ್.** — ಸ್ವಾಮಿ, ಈ ವಿಚಾರ ಪತ್ರಿಕೆಯಲ್ಲೂ ಬಂದಿದೆ. ಈಗ್ಗೆ ಸ್ವಲ್ಪ ದಿವಸದ ಹಿಂದೆ ಮಾನ್ಯ ವ ಮಂತ್ರಿಗಳಾದ ಶ್ರೀಮಾನ್ ಬಸವಣ್ಣಪ್ಪನವರು, ಒಬ್ಬ ಮಾನ್ಯ ಸದಸ್ಯರನ್ನು ಅಂದರೆ ಪಿಕಾರಿಪುರದ ಸದಸ್ಯರನ್ನು ಎಳೆದಾಡಿದ್ದು, ಅವರನ್ನು ಅವಾಚ್ಯ ಶಬ್ದದಿಂದ ಬೈದದ್ದು, ಜಾತಿ ಹೆಸರಿನಲ್ಲಿ ಗಲಾಟೆ ನಡೆದದ್ದು, ಇವೆಲ್ಲದರ ಬಗ್ಗೆ, ಆ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರೂ ಕೂಡ ಈ ವಿಷಯವನ್ನು ಅವರು ಅಧ್ಯಕ್ಷರ ಗಮನಕ್ಕೆ ಏತಕ್ಕೆ ತರಲಿಲ್ಲಾ ? ಇದು ಸರಿಯೋ ತಪ್ಪೋ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದಕ್ಕೊಂದಕ್ಕೆ ಹೇಗಾಗುತ್ತದೆ ಅನ್ನುವುದಕ್ಕೆ ಹೇಳುತ್ತಿದ್ದೇನೆ.

**ಶ್ರೀ ಎಂ. ರಘುಪತಿ.** — ಸ್ವಾಮಿ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ಅದೇನೆಂದರೆ ಈ ಮನೆಯಲ್ಲಿ ಬಂದಿರುವ ವಿಷಯ ಏನು, ಅವರು ಎತ್ತತಕ್ಕಂಥ ವಿಷಯ ಏನು ? (ಗೊಂದಲ)

**ಶ್ರೀ ಕೆ. ಹೆಚ್ ರಂಗನಾಥ್.** — ಸ್ವಾಮಿ, ಎಲ್ಲರಿಗೂ ಮಾತನಾಡುವ ಒಂದು ಹಕ್ಕು ಇದೆ ಎನ್ನುವುದು ನನಗೆ ಗೊತ್ತುಂಟು. ಆದುದರಿಂದ ಇದನ್ನು ಕೇಳುವುದರಲ್ಲಿ ತಪ್ಪೇನು ?

**ಶ್ರೀ ಎಂ. ರಘುಪತಿ.** — ಸ್ವಾಮಿ, ನಾನು ಎತ್ತಿರುವ ಕ್ರಿಯಾಲೋಪವನ್ನು ಇನ್ನೂ ಮುಗಿಸಿಲ್ಲಾ. ಪ್ರತಿಯೊಬ್ಬ ಸದಸ್ಯರಿಗೂ ಈ ಮನೆಯಲ್ಲಿ ಮಾತನಾಡುವ ಹಕ್ಕು ಇದೆ ಎನ್ನುವುದು ನನಗೂ ಗೊತ್ತುಂಟು. ಆದರೆ ಈಗ ಇರುವ ವಿಷಯ ಯಾವುದು, ಅವರು ಎತ್ತಿರುವ ವಿಷಯ ಯಾವುದು, ಇದರ ಬಗ್ಗೆ ತಾವು ತೀರ್ಪು ಕೊಡಬೇಕು. (ಗೊಂದಲ)

**ಶ್ರೀ ಜಿ. ಪಿ. ವಡೆಯರಾಚ್.** — ಮಾನ್ಯ ಮಂತ್ರಿಗಳು ಯಾವ ರೂಲ್ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅನ್ನುವುದನ್ನು ಮೊದಲು ತೋರಿಸಲಿ.

**ಶ್ರೀ ಎಂ. ರಘುಪತಿ.** — ತೋರಿಸಿಕೊಡುತ್ತೇನೆ. (ಗೊಂದಲ)

**ಶ್ರೀ ಜಿ. ಪಿ. ವಡೆಯರಾಜ್.** — ಮೊದಲು ರೂಲ್ ಯಾವುದು ಅನ್ನುವುದನ್ನು ಕೋಟ್ ಮಾಡದೇ ವಿಷಯ ಮಾತನಾಡಬಹುದೇ ? ಅದು ನಿಯಮಾವಳಿ ಪ್ರಕಾರ ಉಲ್ಲಂಘನೆಯಾಗುವುದಿಲ್ಲವೇ? ಮಾನ್ಯ ಮಂತ್ರಿಗಳು ಈ ರೀತಿ ಪಾಯಿಂಟ್ ಆಫ್ ಆರ್ಡರ್ ಎತ್ತಬೇಕಾದರೆ ರೂಲ್ ಗೊತ್ತಿರಬೇಕಲ್ಲಾ. ಮೊದಲು ಹೇಳಲಿ.

**ಶ್ರೀ ಎಂ. ರಘುಪತಿ.** — ಸ್ವಲ್ಪ, ತಾಳ್ಮೆಯಿಂದ ಇರಿ ಹೇಳುತ್ತೇನೆ. ಅಧ್ಯಕ್ಷರೇ, ಈಗ ಸಭೆಯ

ಮುಂದಿರುವ ವಿಷಯ ಯಾವುದು ಮಾನ್ಯ ಕೆ. ಹೆಚ್. ರಂಗನಾಥ್‌ರವರು ಎತ್ತಿರತಕ್ಕಂಥಾ ವಿಷಯ ಯಾವುದು ? ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಅದಕ್ಕೆ ಬೇಕಾದರೆ ಒಂದು ನೋಟೀಸ್ ಕಳುಹಿಸಲಿ. ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಳ್ಳುವುದು ಸರಿಯಲ್ಲ. ಇಲ್ಲದೇ ಹೋದರೆ ಇದು ಒಂದು ತಪ್ಪು ತಿಳುವಳಿಕೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

**ಶ್ರೀ ಜಿ. ಪಿ. ವಡೆಯರಾಜ್.**—ಮಾನ್ಯ ಮಂತ್ರಿಗಳು ಮೊದಲು ಯಾವ ರೂಲ್ ಅನ್ನುವುದನ್ನು ಕೋಟ್ ಮಾಡದೇ ಈ ರೀತಿ ಹೇಳುವುದು ಸರಿಯಲ್ಲ.

The Information Minister may quote in which rule it is there. I am very specific.

Sri M. Raghupathy —He is speaking without knowledge.

Sri G. P. Vadeyaraj.—He is speaking without information.

**ಶ್ರೀ ಜೆ. ಹೆಚ್. ಪಟೇಲ್.**—ಅವರು ಯಾವ ರೂಲ್ ಪ್ರಕಾರ ಹೇಳುತ್ತಿದ್ದಾರೆ ಎನ್ನುವುದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಜಿ. ಪಿ. ವಡೆಯರಾಜ್.**—ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದು ಮಾನ್ಯ ಮಂತ್ರಿಗಳಾದ ಶ್ರೀ ಎಂ. ರಘುಪತಿಯವರು. ಇವರಲ್ಲ. ಅವರು ಹೇಳಬೇಕು.

**ಶ್ರೀ ಜೆ. ಹೆಚ್. ಪಟೇಲ್.**—ಯಾರಾದರೂ ಹೇಳಬಹುದು, ಮಾನ್ಯ ಅಧ್ಯಕ್ಷರ ಗಮನಕ್ಕೆ ತರ ಬಯಸುತ್ತೇನೆ. ಮಾನ್ಯ ಸದಸ್ಯರು ರೂಲ್ 315 ಓದಿಕೊಂಡರೆ ಸಾಕು. ಮುಂದಿನ ಕಾರ್ಯಕಲಾಪ ಗಳನ್ನು ಮುಂದುವರೆಸುವುದಕ್ಕೆ ಅನುಕೂಲವಾಗುತ್ತದೆ.

Rule 315 reads as follows.

"The Speaker, after having called the attention of the House to the conduct of a member who persists in irrelevance or in tedious repetition either of his own arguments or of the arguments used by other members in debate. may direct him to discontinue his speech."

ಆದುದರಿಂದ ದಯವಿಟ್ಟು ವಿರೋಧಿ ಪಕ್ಷದ ಸದಸ್ಯರನ್ನು ಕೂರಿಸಿ ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತೇನೆ.

Sri G P. Vadeyaraj.—You please tell it your collegues.

**ಶ್ರೀ ಎಸ್. ಆರ್. ಬೊಮ್ಮಾಯಿ.**—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ಬಗ್ಗೆ ಮೊದಲು ಏನು ಒಂದು ಸಲಹೆಯನ್ನು ಕೊಟ್ಟರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೇರೆ ಒಂದು ದೃಷ್ಟಿಯಿಂದ ಮಾತನಾಡುವುದಾದರೆ, ಮಾನ್ಯ ಕೆ. ಹೆಚ್. ರಂಗನಾಥ್‌ರವರು ಎತ್ತಿರತಕ್ಕಂಥಾ ವಿಚಾರದ ಬಗ್ಗೆ ಮಾತನಾಡುವುದಾದರೆ, ಮಂತ್ರಿಗಳು ಬೇರೆ ಒಬ್ಬ ಶಾಸಕರೊಂದಿಗೆ ಜಗಳವಾಡಿದರು ಅನ್ನುವ ಮಾತನಾಡಲು ಬಯಸಿದರೆ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸು ತ್ತೇನೆ. ಆದೇನೆಂದರೆ ಹಿಂದಿನ ಮುಖ್ಯಮಂತ್ರಿಗಳು ಈಗಿನ ವಿರೋಧಪಕ್ಷದ ನಾಯಕರನ್ನು ಕಿತ್ತು ಹಾಕುವುದಕ್ಕೆ ಜಗಳ ಮಾಡಿದ್ದಾರೆ ಅನ್ನುವ ಮಾತನ್ನು ಈಗ ನಾನು ಹೇಳಬಹುದೇ ?

ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಮಾನ್ಯ ವೀರಪ್ಪ ಮೊಯಿಲಿಯವ ರನ್ನು ವಿರೋಧಪಕ್ಷದ ನಾಯಕನ ಪಟ್ಟದಿಂದ ಉರುಳಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಪತ್ರಿಕೆ ಯಲ್ಲಿ ಬಂದಿದೆ. ಅದನ್ನು ನಾನು ಇಲ್ಲಿ ಹೇಳಬಹುದೇ ? ಹೇಳಲಿಕ್ಕಾಗುವುದಿಲ್ಲ. ನಾನು ಅದನ್ನು ಹೇಳಬಾರದು

**ಶ್ರೀ ಎಸ್. ಬಂಗಾರಪ್ಪ.**—ಯಾವ ವಿಚಾರವನ್ನು ?

**ಶ್ರೀ ಎಸ್. ಆರ್. ಬೊಮ್ಮಾಯಿ.**—ಶ್ರೀಮಾನ್ ಗೂಂಡೂರಾಯರು ಮೊಯಿಲಿಯವರನ್ನು ಅಧಿಕಾರದಿಂದ ಕೆಳಗೆ ಇಳಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆನ್ನುವ ವಿಚಾರವನ್ನು ನಾನು ಇಲ್ಲಿ ಈಗ ಹೇಳಬಹುದೇ ? ಇದು ಈ ಸಂದರ್ಭಕ್ಕೆ ಸರಿಯಾದುದೇ ? ಈ ಸಂದರ್ಭದಲ್ಲಿ ನಾನು ಈ ವಿಚಾರವನ್ನು ಹೇಳುವುದು ಸರಿಯಾದುದಲ್ಲ.

**ಶ್ರೀ ಕೆ. ಹೆಚ್. ರಂಗನಾಥ್.**—ನಾನು ಹೇಳಿದ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಸಂಬಂಧಪಟ್ಟ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ಈ ವಿಚಾರದಲ್ಲಿ ಪತ್ರವನ್ನು ಬರೆದಿದ್ದಾರೆ. ಇದು ರಿಲೆವೆಂಟಾಗಿಲ್ಲದೆ ಇದ್ದರೆ ನಾನು ಹೇಗೆ ಹೇಳಲಿ ? ಈ ಸದನದ ಸದಸ್ಯರೊಬ್ಬರ ಮೇಲೆ ಆಪಾದನೆ ಬಂದಾಗ ಅದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಇದು ಅಸಂಬಂಧ ಹೇಗೆ ಆಗುತ್ತದೆ ?

**ಶ್ರೀ ಎಸ್. ಆರ್ ಬೊಮ್ಮಾಯಿ.**—ಈ ಸಂದರ್ಭದಲ್ಲಿ ಅದು ಸರಿಯಾದುದಲ್ಲ. ತಾವು ಹೇಳು

ವಂಥ ವಿಚಾರ ಬಹಳ ಮಹತ್ವವಾದುದ್ದು. ಆದರ ಬಗ್ಗೆ ನನ್ನ ಭಿನ್ನಾಭಿಪ್ರಾಯವೇ ಇಲ್ಲ. ಪ್ರಸ್ತುತ ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಸಲಹೆ ಕೊಟ್ಟಿದ್ದಾರೆ ಅದರಂತೆ ನಾವು ಈ ವಿಷಯವನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಮಾತನಾಡೋಣ.

**ಶ್ರೀ ಎಂ. ವೀರಪ್ಪಮೊಯಿಲಿ.**—ನಮಗೆ ಏನಾದರೊಂದು ಉತ್ತರ ಸರ್ಕಾರದಿಂದ ಈ ವಿಚಾರದಲ್ಲಿ ಬೇಕು. ವಿಷಯ ಎಷ್ಟೇ ಸೌಜನ್ಯತೆಯ ಪ್ರಶ್ನೆಯಾಗಿದ್ದರೂ ತಮ್ಮ ಸ್ಥಾನಕ್ಕೆ ಅದು ಘನತೆ ಮತ್ತು ಗೌರವಗಳ ಪ್ರಶ್ನೆಯನ್ನು ತರುವಂಥಾದ್ದಲ್ಲವೆಂದು ಅದನ್ನು ಇಲ್ಲಿ ವ್ಯವಹರಿಸುವುದು ಬೇಡವೆಂದು ಮತ್ತು ಅದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ವಿಚಾರ ಮಾಡೋಣವೆಂದು ಹೇಳಿದರೆ ಮುಂದಿನ ಕ್ರಮಕ್ಕೆ ನಾವು ನೋಟೀಸ್ ಕೊಡಬೇಕು ಎಂದರೆ ಕೊಡಬೇಕಾಗುತ್ತದೆ. ಇದರ ಬಗ್ಗೆ ತಾವು ಸದ್ಭಾವನೆಯನ್ನು ವ್ಯಕ್ತಮಾಡಿ ಏನನ್ನೂ ಹೇಳದಿದ್ದರೆ ಹೇಗೆ ?

**ಅಧ್ಯಕ್ಷರು.**—ಈಗ ತಾವು ಮತ್ತು ಹಿರಿಯ ಹಾಗೂ ಅನುಭವೀ ಸದಸ್ಯರಾದ ರಂಗನಾಥ್ ಅವರು ಪ್ರಸ್ತಾಪ ಮಾಡಿದ್ದಕ್ಕೆ ಮಾನ್ಯ ಬೊಮ್ಮಾಯಿಯವರು ಅದಕ್ಕೆ ಪೂರಕವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಬೊಮ್ಮಾಯಿಯವರು ಈ ವಿಷಯವನ್ನು ಚರ್ಚೆ ಮಾಡುವುದು ಬೇಡವೆಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ವಿಷಯ ಇಲ್ಲಿ ಚರ್ಚೆ ಮಾಡುವ ವಸ್ತುವಾಗಬಾರದು. ಇದು ಚರ್ಚೆಯ ವಸ್ತುವಾಗುವುದಕ್ಕೆ ಅವಕಾಶವೂ ಇಲ್ಲ, ಅವಶ್ಯಕತೆಯೂ ಇಲ್ಲ. ನಾನು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವಾಗ ಇದರ ಬಗ್ಗೆ ನನಗೆ ಅಧಿಕಾರ ಇದೆಯೆಂದು ತಿಳಿದು ನಿರ್ಣಯವನ್ನು ತೆಗೆದುಕೊಂಡಿದ್ದೇನೆ. ತಾವು ನನಗೆ ಇದರ ಬಗ್ಗೆ ಅಧಿಕಾರ ಇಲ್ಲವೆಂದು ವಾದ ಮಾಡುವುದು ತಮ್ಮ ನಿಲುವು ಆದರೆ, ಇದನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಬೇಕು. ಈ ವಿಚಾರದ ಬಗ್ಗೆ ನನಗೆ ಸ್ಪಷ್ಟವಾದ, ನಿರ್ದಿಷ್ಟವಾದ, ನಿಖರವಾದ ಮತ್ತು ಶಾಸನಬದ್ಧವಾದ ಅಧಿಕಾರ ನನಗೆ ಇದೆ ಎಂದು ತಿಳಿದು ನಾನು ಸಮಿತಿಯನ್ನು ಮಾಡಿದ್ದೇನೆ. ಈ ವಿಚಾರದಲ್ಲಿ ಅನುಮಾನಕ್ಕೆ ಯಾವ ಎಡೆಯೂ ಇಲ್ಲ, ಅವಕಾಶವೂ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ವಿಚಾರ ಮತ್ತೆ ಇಲ್ಲಿ ಚರ್ಚೆ ಮಾಡುವ ವಸ್ತುವಾಗಬಾರದು. ಈಗ ನಾವು ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

**ಶ್ರೀ ಕೆ. ಹೆಚ್. ರಂಗನಾಥ್.**—ಆ ಸಮಿತಿಯು ಇವತ್ತಿನಿಂದಲೇ ಅಸ್ತಿತ್ವದಲ್ಲಿರಬಾರದು. ಏಕೆಂದರೆ ಇದು ಅಸ್ತಿತ್ವದಲ್ಲಿದ್ದರೆ ಚರ್ಚೆಯ ವಸ್ತುವಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ತಾವು ಇನ್ನೊಮ್ಮೆ ಯೋಚನೆ ಮಾಡಿ ಹೇಳಬೇಕು, ಇದು ಅಸ್ತಿತ್ವದಲ್ಲಿ ಉಳಿಯುತ್ತದೆಯೇ ಇಲ್ಲವೇ ?

**ಅಧ್ಯಕ್ಷರು.**—ಯೋಚನೆ ಮಾಡಿ ಪ್ರಸ್ತಾಪ ಮಾಡಿದ್ದೇನೆಂದು ಹೇಳಿದ್ದೇನೆ.

## ಗಮನ ಸೆಳೆಯುವ ಸೂಚನೆಗಳು

**ವಿಷಯ : ಸಕಲೇಶಪುರದ ಹತ್ತಿರ ಇರುವ ಬಾಳ್ಳು ಪೇಟೆಯ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ**

**ಶ್ರೀ ಎಂ. ವೀರಪ್ಪಮೊಯಿಲಿ.**—ಸನ್ಮಾನ್ಯ ಅಧ್ಯಕ್ಷರೇ, ಸಕಲೇಶಪುರದ ಹತ್ತಿರ ಇರುವ ಬಾಳ್ಳು ಪೇಟೆಯ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಆರ್. ಸಿ. ಜಿಗಜಿನಗಿ** (ರಾಜ್ಯ ಗೃಹಮಂತ್ರಿ).—ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಬಾಳ್ಳು ಪೇಟೆಯು ಒಂದು ಹಳ್ಳಿಯಾಗಿದೆ. ಈ ಹಳ್ಳಿಯ ಜನಸಂಖ್ಯೆ ಸುಮಾರು 2943. ಹರಿಜನರ ಸಂಖ್ಯೆ 955, ಲಿಂಗಾಯಿತರ ಸಂಖ್ಯೆ 1724. ಬ್ರಾಹ್ಮಣರು, ಮುಸಲ್ಮಾನರು, ಕ್ರಿಶ್ಚಿಯನ್ನರು ಮತ್ತು ಗೌಡರು ಇತ್ಯಾದಿಗಳು ಸುಮಾರು 264 ಇದ್ದಾರೆ.

2 ಈ ಹಳ್ಳಿಯಲ್ಲಿ 1-3-1983 ಮತ್ತು 20-5-1983ರ ಅವಧಿಯಲ್ಲಿ ಬೇರೆ ಬೇರೆ ಕಾರಣಗಳಿಂದ ಹರಿಜನರ ಮತ್ತು ಇತರ ಹಿಂದುಗಳ ನಡುವೆ ಕಲಹಗಳು ನಡೆದಿವೆ. ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಹಾಗೂ ಆರ್ಥಿಕ ಅಸಮತೆ ಹಾಗೂ ಹರಿಜನರ ಬಗ್ಗೆ ತಾರತಮ್ಯ ಇದಕ್ಕೆ ಮೂಲಕಾರಣ.

3. ದಿನಾಂಕ 19-5-1983ರಂದು ಕೆಲವು ಹರಿಜನ ಯುವಕರು ಒಬ್ಬ ಹರಿಜನೇತರ ಮೋಟಾರು ಚಾಲಕನನ್ನು ಹರಿಜನ ಕಾಲೋನಿಯ ಮೂಲಕ ಬರುತ್ತಿದ್ದಾಗ ಹೊಡೆದರು. ಈ ವಿಷಯದಲ್ಲಿ ಸಕಲೇಶಪುರ ಗ್ರಾಮೀಣ ಪೋಲೀಸ್‌ಠಾಣೆಯಲ್ಲಿ ಗುನ್ನೆ ನಂ 95-83 ಭಾರತೀಯ ದಂಡ ಸಂಹಿತೆ 143, 341, 323 ಮತ್ತು 34 ರ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ ಮತ್ತು ತನಿಖೆ ಮುಂದುವರಿಯುತ್ತಿದೆ.

4. ದಿನಾಂಕ 20-5-1983ರಂದ ಬಾಳ್ಳು ಪೇಟೆಯ ಹರಿಜನ ಕಾಲೋನಿಯ ಸಿದ್ದಯ್ಯ ಎಂಬು